ನಂತರ ಎಂಎಸ್ಸಿ ಮಾಡಿ ಸಂಶೋಧನೆಯತ್ತ ಒಲವು ಬೆಳೆಸಿಕೊಂಡರು.

ತಂತ್ರಜ್ಞಾನ ಕ್ಷೇತ್ರದಲ್ಲಿ ದೇಶಕ್ಕಾಗಿ ದೊಡ್ಡದೇನನ್ನಾದರೂ ಮಾಡಬೇಕು ಎಂದು ನಿರ್ಧರಿಸಿದ ರೆಡ್ಡಿ ಅವರ ಸಂಕಲ್ಪದಿಂದಾಗಿ, ಚಳ್ಳಕೆರೆ ಬಳಿ 11,000 ಎಕರೆ ಜಾಗವನ್ನು ಸರ್ಕಾರದಿಂದ ಖರೀದಿಸಿ, ದೇಶದ ಅತ್ಯಂತ ದೊಡ್ಡ ಸೈನ್ಸ್ ಪಾರ್ಕ್ ನಿರ್ಮಾಣಗೊಳ್ಳುತ್ತಿದೆ. ಇದನ್ನು ಜಪಾನ್ ದೇಶದ ಸುಕುಬಾ ಸೈನ್ಸ್ ಸಿಟಿ ಮಾದರಿಯಲ್ಲಿ ಎಚ್.ಎನ್. (ಎಚ್ ನರಸಿಂಹಯ್ಯ) ಅವರ ಹೆಸರಿನಲ್ಲಿ ನಿರ್ಮಿಸಲಾಗುತ್ತಿದೆ. ವಿವಿಧ ಸಂಸ್ಥೆ, ಇಲಾಖೆಗಳ ಜೊತೆಗೂಡಿ ಜಂಟಿಯಾಗಿ ಖರೀದಿಸಿದ ಜಾಗದಲ್ಲಿ ಭಾರತೀಯ ಅಣುಶಕ್ತಿ ಇಲಾಖೆಗೆ 3000 ಎಕರೆ, ಡಿ.ಆರ್.ಡಿ.ಓ.ಗೆ 4500 ಎಕರೆ, ಭಾರತೀಯ ವಿಜ್ಞಾನ ಸಂಸ್ಥೆಗೆ 2500 ಎಕರೆ ಮತ್ತು ಇಸ್ರೋ ಸಂಸ್ಥೆಗೆ 500 ಎಕರೆ ಜಾಗವನ್ನು ನೀಡಲಾಗಿದೆ. ಇದೇ ಜಾಗದಲ್ಲಿ ಇಸ್ರೋದ ಚಂದ್ರಯಾನದ ಪೂರ್ವಭಾವಿ ಕೆಲಸಗಳು ನಡೆಯುತ್ತಿವೆ. ಇಸ್ರೋ ಸಂಸ್ಥೆಯ ಕೆಲಸಗಳನ್ನು ಖಾಸಗಿ ಕ್ಷೇತ್ರಕ್ಕೆ ತೆರೆಯುವ ಕಸ್ತೂರಿರಂಗನ್ ಅವರ ಅಭಿಲಾಷೆಯನ್ನು ಸಾಕಾರವಾಗಿಸಲು ರೆಡ್ಡಿ ಅವರು ವಿವಿಧ ಉದ್ದಿಮೆಗಳಿಂದ 750 ಕೋಟಿ ರೂಪಾಯಿ ಸಂಗ್ರಹಿಸಿದ್ದರು. ಉಪಗ್ರಹ ತಯಾರಿಸುವ ಕಂಪನಿಯನ್ನು ಪ್ರಾರಂಭಿಸಿದರು.

ಇಸ್ರೋ ಸಂಸ್ಥೆ ಇದ್ದಕ್ಕಿದ್ದಂತೆ ಪ್ರೈವೆಟೈಸೇಷನ್ ಬೇಡ ಎಂದಿತು. ಆಗ ರೈತರಿಗೆ ನೆರವಾಗುವ ರೆಡ್ಡಿ ಟ್ಯೂಬ್ ಅನ್ವೇಷಣೆಯಾಯಿತು. ರೈತರ ಹಸು ಎಮ್ಮೆಗಳ ಹಾಲಿನ ಉತ್ಪಾದನೆಯನ್ನು ಶೇ. 20ರಷ್ಟು ಹೆಚ್ಚಿಸುವ, ಕೈಯಿಂದ ಬಳಸಲಾಗುವ ರೆಡ್ಡಿ ಟ್ಯೂಬ್ ರೈತರ ಆರ್ಥಿಕ ಆದಾಯವನ್ನು ವಾರ್ಷಿಕ ರೂ. 2 ಲಕ್ಷದಷ್ಟು ಹೆಚ್ಚಿಸುತ್ತದೆ.

ಹನಿ ನೀರಾವರಿಯಲ್ಲಿ ಪೈಪುಗಳ ಒಳಭಾಗ ಕ್ಲೀನ್ ಮಾಡಲ ಆಸಿಡ್ ಬಳಸಲಾಗುತ್ತದೆ. ಇದು ಭೂಮಿಗೆ ಸೇರಿ ಮಣ್ಣನ್ನು ಹಾಳುಮಾಡುತ್ತದೆ. ಆಸಿಡ್‌ನಿಂದ ಏಳುವ ಹೊಗೆಯ ಜ್ವಾಲೆಗಳು ರೈತರ ಶ್ವಾಸಕೋಶಕ್ಕೆ ಸೇರಿ ಗಾಸಿ ಉಂಟು ಮಾಡುತ್ತವೆ. ಹನಿ ನೀರಾವರಿಯ ಪೈಪುಗಳಿಗೆ ರೆಡ್ಡಿ ಟ್ಯೂಬನ್ನು ಸೇರಿಸಿ ಶಾಕ್ ವೇವ್ ಕಳಿಸಿದರೆ ಸಾಕು, ಕೊಳವೆಗಳಲ್ಲಿ ಸೇರಿಕೊಂಡಿರುವ ಕಸವೆಲ್ಲ ಹೊರಗೆ ಬರುತ್ತದೆ. ಇಲ್ಲಿ ಯಾವುದೇ ವಿದ್ಯುತ್ ಆಗಲಿ, ರಾಸಾಯನಿಕ ವಸ್ತುವಾಗಲಿ ಬಳಕೆಯಾಗುವುದಿಲ್ಲ.

ರೆಡ್ಡಿ ಟ್ಯೂಬ್ ಮೇಲೆ ನೂರಾರು ಸಂಶೋಧನಾ ಪ್ರಬಂಧಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಗೊಂಡಿವೆ. ರೆಡ್ಡಿ ಅವರ ಬಳಿ ಈಗ 50ಕ್ಕೂ ಹೆಚ್ಚು ಹಕ್ಕುಸ್ವಾಮ್ಯಗಳಿವೆ. ಏಳೆಂಟು ಕಂಪನಿಗಳನ್ನು ಶುರು ಮಾಡಿದ್ದಾರೆ. ಸೇವಾ ನಿವೃತ್ತಿಯ ನಂತರ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಕೊಂಡಿರುವ ಅವರು ಪ್ರತಿ ವರ್ಷ 30000 ವಿದ್ಯಾರ್ಥಿಗಳಿಗೆ ವಿಜ್ಞಾನದ ಮಹತ್ವವನ್ನು ತಿಳಿಸಿಕೊಡುತ್ತಿದ್ದಾರೆ.

## ಸಿ.ವಿ. ವಿಶ್ವೇಶ್ವರ

'ಬ್ಲಾಕ್ ಹೋಲ್ ಮ್ಯಾನ್ ಆಫ್ ಇಂಡಿಯಾ' ಎಂದು ಪ್ರಸಿದ್ಧರಾದ ವಿಶ್ವೇಶ್ವರ 'ಗೊಂಬೆಗಳ ಊರು' ಚನ್ನಪಟ್ಟಣದವರು. ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಮತ್ತು ಸೆಂಟ್ರಲ್ ಕಾಲೇಜುಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾಭ್ಯಾಸ ಮಾಡಿದ ವಿಶ್ವೇಶ್ವರ, ತಾವು ಓದಿದ ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿಕೊಂಡರು. ಕಣ ಭೌತ ವಿಜ್ಞಾನದಲ್ಲಿ ಆಸಕ್ತಿ ತಳೆದು ಅಮೆರಿಕದ ಭೌತವಿಜ್ಞಾನಿ ರಾಬರ್ಟ್ ಫುಲ್ಲರ್ ಜೊತೆಗೂಡಿ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಕೆಲ ಕಾಲ ಕೆಲಸ ಮಾಡಿದರು. ನಂತರ ಆಲ್ಬರ್ಟ್ ಐನ್‌ಸ್ಟೈನ್ ನಿರೂಪಿಸಿದ ಸಾಮಾನ್ಯ ಸಾಪೇಕ್ಷ ಸಿದ್ಧಾಂತದ ಕಡೆಗೆ ಆಕರ್ಷಿತರಾಗಿ, ಮೇರಿಲ್ಯಾಂಡ್ ವಿಶ್ವವಿದ್ಯಾಲಯ ಸೇರಿಕೊಂಡು ಶ್ವಾರ್ಸ್ ಶೀಲ್ಡ್ ಕಪ್ಪು ರಂಧ್ರದ



ಕುರಿತು ಪಿಎಚ್.ಡಿ ಪಡೆದರು. ಕಪ್ಪುಕುಳಿಯ ರಚನೆಯ ಕುರಿತು ಆಳವಾಗಿ ಅಧ್ಯಯನ ಮಾಡಿದ ವಿಶ್ವದ ಪ್ರಪ್ರಥಮ ವಿಜ್ಞಾನಿ ಎನಿಸಿಕೊಂಡ ಅವರು, ಕಪ್ಪು ಕುಳಿಗಳ ಸ್ಥಿರತೆಯ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಅವುಗಳಿಂದ ಹೊಮ್ಮುವ ಅಲೆಗಳನ್ನು ಗುರುತಿಸಬಹುದು ಎಂದು ಜಗತ್ತಿಗೆ ತಿಳಿಸಿದರು.

ವಿಶ್ವೇಶ್ವರ ಅವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಜವಾಹರಲಾಲ್ ನೆಹರೂ ತಾರಾಲಯ ಅಸ್ತಿತ್ವಕ್ಕೆ ಬಂದು, ಇಡೀ ಭಾರತದ ವಿದ್ಯಾರ್ಥಿಗಳ ಮತ್ತು ಖಗೋಳ ಆಸಕ್ತರ ಆಕರ್ಷಣೆಯ ಕೇಂದ್ರವಾಯಿತು. ವಿಜ್ಞಾನವನ್ನು ಜನಪ್ರಿಯಗೊಳಿಸಲು ತಾರಾಲಯದ ಅನೇಕ ಕಾರ್ಯಕ್ರಮಗಳ ಕುರಿತು ಸರಳ ಕನ್ನಡದಲ್ಲಿ ಕಿರು ಟಿಪ್ಪಣಿಗಳನ್ನು ಬರೆದರು. 'ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಶನ್' (ಬೇಸ್) ಸಂಸ್ಥೆ ಹುಟ್ಟು ಹಾಕಿ ವಿದ್ಯಾರ್ಥಿ ಮತ್ತು ಅಧ್ಯಾಪಕರಲ್ಲಿ ವಿಜ್ಞಾನದ ಕುರಿತು ಆಸಕ್ತಿ ಮೂಡಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. 1992ರಲ್ಲಿ ಪ್ರಾರಂಭವಾದ 'ಬೇಸ್' ಈಗಲೂ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

## ಮೈಸೂರು ಎ. ವಿಶ್ವಾಮಿತ್ರ

ಶಿವಮೊಗ್ಗದಲ್ಲಿ ಜನಿಸಿದ ಮೈಸೂರು ಅನಂತಮೂರ್ತಿ ವಿಶ್ವಾಮಿತ್ರ ಮಾಲೆಕ್ಯುಲರ್ ಬಯೋಫಿಸಿಕ್ಸ್ ಮತ್ತು ಕ್ರಿಸ್ಟಲೊಗ್ರಾಫರ್ ಎಂದೇ ಪ್ರಸಿದ್ಧರಾಗಿದ್ದು, X–ಕಿರಣ ಮತ್ತು ಡಿಎನ್‌ಎ ತುಂಡಾಗುವಿಕೆಯನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಪ್ರಮುಖರಲ್ಲೊಬ್ಬರು. ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿಯಲ್ಲಿ ಹಿರಿಯ ವಿಜ್ಞಾನಿಯಾಗಿದ್ದ ಅವರು, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಭೌತವಿಜ್ಞಾನದ ಪ್ರೊಫೆಸರ್ ಆಗಿ ದುಡಿದಿದ್ದಾರೆ. ಕೇಂಬ್ರಿಡ್ಜ್ ವಿವಿಯ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಅಕೌಸ್ಟಿಕಲ್ ಸೊಸೈಟಿ ಆಫ್ ಇಂಡಿಯಾ ನೀಡುವ ಸಿ.ವಿ. ರಾಮನ್ ಪ್ರಶಸ್ತಿ ಮತ್ತು ಯುಜಿಸಿ ನೀಡುವ ಜೆಸಿ ಬೋಸ್ ಪ್ರಶಸ್ತಿಗೆ ವಿಶ್ವಾಮಿತ್ರ ಭಾಜನರಾಗಿದ್ದರು.

## ಹೊಸಹಳ್ಳಿ ರಾಮಸ್ವಾಮಿ

ನವೆಂಬರ್ 13, 1950ರಂದು ತುಂಗಾ ತೀರದ ಮತ್ತೂರು–ಹೊಸಹಳ್ಳಿಯಲ್ಲಿ ಜನಿಸಿದ ರಾಮಸ್ವಾಮಿಯವರು ಆಹಾರ ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದವರು. ಬೆಂಗಳೂರು ವಿವಿಯಿಂದ ವಿಜ್ಞಾನ ಪದವಿ ಸಂಪಾದಿಸಿದ ಇವರು, ಸೆಂಟ್ರಲ್ ಫುಡ್ ಟೆಕ್ನಾಲಜಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1978ರಲ್ಲಿ ಕೆನಡಾದ ಬ್ರಿಟಿಷ್ ಕೊಲಂಬಿಯಾ ವಿವಿ ಸೇರಿಕೊಂಡು, ಪಿಎಚ್.ಡಿ ಅಧ್ಯಯನ ಮಾಡಿದರು. ಅತಿಯಾದ ಒತ್ತಡ ಬಳಸಿಕೊಂಡು ಕೆಲಸ ಮಾಡುವ ಕುಕ್ಕರ್‌ಗಳಲ್ಲಿ ಉಷ್ಣಾಂಶ ಹೇಗೆ ಹಂಚಲ್ಪಡುತ್ತದೆ ಎಂಬುದನ್ನು ಕರಾರುವಾಕ್ಕಾಗಿ ಪತ್ತೆ ಮಾಡಿದ್ದ ರಾಮಸ್ವಾಮಿಯವರು — ಆಹಾರ ಸಂಸ್ಕರಣೆ, ಉತ್ಪಾದನೆ ಉದ್ಯಮಗಳಿಗೆ ನೆರವಾದರು.



ಶೇಖರಿಸಿಟ್ಟ ಪದಾರ್ಥಗಳು ಎಷ್ಟು ದಿನದವರೆಗೆ ಕೆಡುವುದಿಲ್ಲ ಎಂಬುದನ್ನು ನಿಖರವಾಗಿ ಲೆಕ್ಕ ಮಾಡುವುದಲ್ಲದೆ, ಅತಿನೇರಳೆ ಕಿರಣಗಳ ಬಳಕೆಯಿಂದ ಶೀತಲೀಕರಿಸಿದ ಆಹಾರವನ್ನು ಕಾಪಾಡುವ ವಿನೂತನ ಕ್ರಮವನ್ನು ನಿರೂಪಿಸಿದ್ದರು. ಭಾರತ ಸರ್ಕಾರದ ಜ್ಯುವೆಲ್ ಆಫ್ ಇಂಡಿಯಾ, ಕೆನಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫುಡ್ ಸೈನ್ಸ್ ಅಂಡ್ ಟೆಕ್ನಾಲಜಿ ಸಂಸ್ಥೆಯ ಡಬ್ಲ್ಯು.ಜೆ. ಯುವ ಪ್ರಶಸ್ತಿ, ನ್ಯಾಷನಲ್ ಅಸೋಸಿಯೇಷನ್ ಆಫ್ ಎಂಜಿನಿಯರಿಂಗ್ ಅಂಡ್ ಫುಡ್‌ನವರ ಜೀವಮಾನ ಸಾಧನೆ ಪ್ರಶಸ್ತಿಗೆ ಭಾಜನರಾಗಿರುವ ರಾಮಸ್ವಾಮಿ ಅವರೀಗ ಕೆನಡಾದ ಮೆಕ್ ಗಿಲ್ ವಿವಿಯಲ್ಲಿ ಪೂರ್ಣಾವಧಿ ಪ್ರಾಧ್ಯಾಪಕರು.